ಕೇಳೀಯಪ್ಪ, ಅವ್ಳೂ ತೀರ್ಕಂಡ್ಲು ಕಣಪ್ಪ. ಎಲ್ಲ ವಿಧಿ'.

ಮಂಜು ತೀರಿಕೊಂಡಳೆ? ಎಂಥ ಚಂದನೆ ಹುಡುಗಿ. ಬಟ್ಟಲು ಕಣ್ಣು, ಗುಳಿಕೆನ್ನೆ, ಉದ್ದ ಜಡೆಯ ಮುದ್ದು ಹುಡುಗಿ ಅವಳು. ತುಸು ಮೊದ್ದು, ಒಂಚೂರೇ ಚೂರು. ಎಲ್ಲವೂ ಅವಳಿಗೆ ಒಂದರೆ ಗಳಿಗೆ ಬಿಟ್ಟು ಅರ್ಥವಾಗುತ್ತಿತ್ತು. ಎಲ್ಲ ನಿಧಾನ. ಹಾಗಾಗಿ ಅವಳಿಗೆ ಮೊದ್ದುಮಂಜುವೆಂಬ ಅಡ್ಡ ಹೆಸರಿತ್ತು. ಚಿಕ್ಕವರಿಂದ ದೊಡ್ಡವರವರೆಗೆ ಎಲ್ಲರಿಗೂ ಅವಳೊಂದು ಗೇಲಿಯ ವಸ್ತುವಾಗಿದ್ದಳು. ಅಂಥ ಮಂಜು ಅದೊಮ್ಮೆ ಸ್ಕೂಲ್ ಡೇಯಲ್ಲಿ ಡ್ಯಾನ್ಸ್ ಮಾಡಿದಳು. ಡ್ಯಾನ್ಸ್ ಮಾಡುವುದರಲ್ಲಿ ಅಂಥ ವಿಶೇಷವಿಲ್ಲ, ನಿಜ, ಆದರೆ ಮಂಜು ಮಾಡಿದ ಡ್ಯಾನ್ಸು ಮಾತ್ರ ವಿಶೇಷವಾಗಿಬಿಟ್ಟಿತ್ತು. ಅವಳಿಗೆ ಹಾಗೆ ಸುತ್ತಿಸುತ್ತಿ ಡ್ಯಾನ್ಸ್ ಮಾಡುವುದನ್ನ ಕಲಿಸಿದ ಮೇಸ್ಟ್ರು ಯಾರೋ, ಡ್ಯಾನ್ಸಿಗೆ ಇಂಥ ಲಂಗ ಹಾಕಿಕೋ ಅಂದವರ್ಯಾರೋ, ಒಟ್ಟು ಮಂಜು ಡ್ಯಾನ್ಸ್ ಮಾಡಿ ಸ್ಟೇಜಿನ ಮೇಲೆ ಸುರುಳಿ ಸುತ್ತಿದ್ದರ ಪರಿಣಾಮ ಕೆಳಗೆ ಕೂತು ಪ್ರೋಗ್ರಾಂ ನೋಡಿದವರಿಗೆ ಆಡಿಕೊಳ್ಳಲು ವಿಷಯ ಸಿಕ್ಕಿತ್ತು. ಅಂದಿನಿಂದಲೇ ಮಂಜುವಿಗೆ ಮೊದ್ದು ಹೋಗಿ ಮೊದೆಯೆಂಬ ಹೆಸರು ಸೇರಿಕೊಂಡಿತ್ತು. ಹೋದಲ್ಲಿ ಬಂದಲ್ಲೆಲ್ಲಾ ಮೊದೆಯದ್ದೇ ಮಾತು, ಮೊದೆ ಮೊದೆ... ಶಾಲೆಯ ಕಾಂಪೋಂಡಿನಿಂದ, ಬಸ್ ಸ್ಟಾಂಡಿನ ಗೋಡೆಯ ತನಕ ಮಂಜುವಿನ ಮೊದೆಯದ್ದೇ ಚಿತ್ರ ಬರಹ. ಈ ಮೊದಲೂ, ನನಗೆ ಅವಳನ್ನು ಯಾರಾದರೂ ಏನಾದರೂ ಅನ್ನುವಾಗ ತುಂಬ ಬೇಸರವಾಗುತ್ತಿತ್ತು. ಈಗಂತೂ ನಿಜಕ್ಕೂ ಬೆಂಕಿಯೇ ಹತ್ತಿತ್ತು, ನನ್ನೆದುರು ಅವಳನ್ನು ಹಾಗಂದವರೊಂದಿಗೆ ಜಗಳಕ್ಕೂ ಬಿದ್ದಿದ್ದೆ. ಹಾಗೊಮ್ಮೆ ನಾನು ಜಗಳಾಡುತ್ತಿರುವಾಗ ನನ್ನತ್ತ ಕೃತಜ್ಞತೆಯ ವಾರೆನೋಟವೊಂದನ್ನು ಬೀರಿಹೋದ ಮಂಜು ಮುಂದಿನ ಎರಡು ತಿಂಗಳಲ್ಲಿ ನನ್ನನ್ನು ಪಂಚಾಯಿತಿ ಕಟ್ಟೆಯ ಮೇಲೆ ಕೂಡಿಸಿದ್ದಳು. ಊರಿನವರೊಂದಿಗೆ ಜಗಳಾಡಿದ್ದ, ಅವಳ ಅಡ್ಡ ಹೆಸರುಗಳನ್ನು ಗೋಡೆಯಿಂದ ಒರೆಸಿಹಾಕಿದ್ದ ನನ್ನ ಮೇಲೆ, ಅಂದು ಮಂಜು ಅಪವಾದ ಹೊರಿಸಿದಾಗ, ಅವಳು ಹೇಳುತ್ತಿರುವುದು ಸರಿಯೆಂದೇ ಊರವರಿಗೆ ಅನಿಸಿರಬೇಕೋ ಏನೊ! ಅಂದು ಅಷ್ಟೆಲ್ಲ ಆಗಿ, ನನ್ನ ಬದುಕು ದಿಕ್ಕು ತಪ್ಪಿ, ಅಪ್ಪನ ಜೀವಕ್ಕೇ ಎರವಾದಮೇಲೆ ಇದೀಗ ಮಂಜುವೂ ಇಲ್ಲವಂತೆ!

ಒಂದೇ ನಿಮಿಷದ ಮೌನದಲ್ಲಿ ನನಗೆ ನಡೆದಿದ್ದೆಲ್ಲವೂ ಕಣ್ಮುಂದೆ ಸರಿದು ಹೋಗಿ ತಲೆ ಧಿಮ್ಮೆಂದಿತು.

'ಏನಾಯ್ತು ಅವಳಿಗೆ?' ನಾನು ಬಲು ಪ್ರಯಾಸದಿಂದ ದನಿ ಹೊರಹಾಕಿದ್ದೆ.

'ಉರ್ಲಾಕೊಂಡ್ಲು ಮೊಗ. ಎಲ್ಲ ನಮ್ ಕರ್ಮ. ಈಗ ನಾನು ಮಾಡಿದ್ದು ಸರಿ ಅನ್ನಕ್ಕಲ್ಲ ಮೊಗ ನಾ ಬೊಂದಿರೋದು, ಆದ್ರೆ ಮೊಂಜು ಪಾಪ, ಏನ್ಮಾಡ್ಬೇಕೂಂತ ಗೊತ್ತಾಗ್ದೇನೆ ನಿನ್ ಮೇಲೆ ಯೋಳ್ಬುಟ್ಟದೆ ಕನಪ್ಪ, ಅವೊತ್ತು ಇಸ್ಕೂಲ್ ಡೇ ದಿವ್ಸ ಅವ್ಳುಗೆ ಐಕ್ಳು ಆಡ್ಕೊತ್ಲೂವೆ, ನೀನು ಬೋದಿದ್ದಲ್ಲ ಅವುಕೆ, ಅದ್ನೆ ಗ್ಯಾಪ್ನ ಮೊಡಿಕಂಡು, ನನ್ ಕಂಡ್ರೆ ಪ್ರೀತಿ ಅದೆ ಅನ್ನಕಬುಟ್ಟರ್ಬೇಕು, ಇಲ್ಲ ಎಂಗನ ಕಾಪಾಡ್ತನೆ ಅನ್ಕತ್ತೋ ಗೊತ್ತಿಲ ಕನ ಮೊಗ... ನಾ ನೇರ ನೋಡ್ಡೋಗಿದ್ರೆ ಕಡೀಗಂಟ ಗೊತ್ತಾಯ್ತಿರ್ನಿಲ್ವೋ ಏನೋ, ಬೋಸುಡಿಕೆ ನನ್ ಮಗ್ನಿಂದಾಗಿ ಏನೆಲ್ಲ ಆಗೋಯ್ತು. ಕಂಡೇಟ್ಗೆ, ಬೆಂಕಿ ಹತ್ಗಬುಡ್ತು ಮೊಗ ನಂಗೆ... ಮೈಯಲ್ಲ ನಡ್ಕ ಹತ್ಕ ಬುಡ್ತು... 'ಅಯ್ಯೋ ಏನೇ ಮುಂಡೆ ಇದೂ' ಅಂದೆ, 'ನಿನ್ನ ಕೊಂದ್ಬುಡ್ತೀನಿ ಅಂತ ಎದ್ರುಸ್ತಾ ಇದ್ದ ಕನವ್ವ, ಎದ್ರುಕಬುಟ್ಟೇಂತ' ಅಂತ ಗೋಳೋ ಅಂದ್ಲು ಕನಪ್ಪ. ನಾ ಕೂಡಾವ್ಳಿ ಮಾಡ್ಕಂಡಿದ್ನಲ್ಲ ಮಿಂಡ್ರುಗುಟ್ಟೋನು, ಅವೊತ್ತು ಬುಟ್ಹೋಡೋದೋನು ಎಲ್ಲತ್ನೋ ಗೊತ್ತಿಲ್ಲ. ಆಮ್ಯಾಕೆ ಮೊಂಜು ನೇಣಾಕಂಡ್ಲು ಮೊಗ. ನಾನೂ ನೇಣಾಕಬೇಕಿತ್ತು. ಆದ್ರೆ ಆ ಮುಂಡೇಮಗುಂಗೆ ಉಟ್ಟೋವು ಇನ್ಮೂರು ಇದ್ವಲ್ಲ. ಅವುನ್ನ ಸಾಕ್ಬೇಕಲ್ಲಾಂತ ಬೊದ್ಕಿದೀನಿ. ಎಂಗೋ, ಬೊದ್ಕಿದ್ದುಕ್ಕೆ ನಿನ್ನ ಕಂಡಂಗಾಯ್ತು ಮೊಗ. ಪಾಪ ನನ್ ಮೊಗ, ಉಟ್ಟುತ್ಲೂ ಅದ್ರಪ್ಪ ಬುಟ್ಹೋದ, ಕೂಡಿಕೆ ಮಾಡ್ಕಂಡೋನು ನನ್ ಮೊಗೀನ್ ಜೀವ್ನಾನೇ ಕಿತ್ಕಂಡ, ಏನೂ ಸುಕಮಕ ಕಾಣ್ದೆ ಸತ್ತೋಯ್ತು ಪಾಪ. ನಮ್ಮಿಂದಾಗಿ ನಿಮ್ಗೋಳ್ ಬೊದ್ಕೂ ಆಳಾಗೋಯ್ತು... ಮೊಗ ಎಂಗಾರ ದೊಡ್ ಮೊನ್ಸು ಮಾಡಿ ನನ್ನು ನನ್ನ ಮೊಗೀನು ಕ್ಷಮ್ಸುಬುಡಪ್ಪ, ಮೊದ್ಲೇ ಅದು ಮೊದ್ದು...'

ಹೊನ್ನಿ ಎಷ್ಟೋ ಹೊತ್ತಿನವರೆಗೆ ಅಳುತ್ತಿದ್ದಳು.

ನಾನೂ...

●